ಲೇಖನ 02

# ಕೊಡಗಿನ ದೇವರಕಾಡುಗಳು

ಕೊಡಗು ಕರ್ನಾಟಕ ರಾಜ್ಯದಲ್ಲಿ ಎರಡನೇ ಚಿಕ್ಕ ಜಿಲ್ಲೆ. ಬೆಟ್ಟಗುಡ್ಡದ ಸಾಲಿನಲ್ಲಿರುವ ಪ್ರಕೃತಿಯ ಸಿರಿಯ ವೈಭೋಗದ ನಾಡು. ಈ ಪ್ರಕೃತಿ ಸಿರಿಯ ಅಂದವನ್ನು ಕಂಡ ಜನರು ಕೊಡಗನ್ನು ದಕ್ಷಿಣದ ಕಾಶ್ಮೀರ ಎಂದೇ ಹಿಂದಿನಿಂದಲೇ ಕರೆಯುತ್ತಾರೆ. ಕಾವೇರಿ ಮಾತೆಯ ಉಗಮ ಸ್ಥಾನ ಕೊಡಗು. ಬ್ರಿಟೀಷರು ಕೊಡಗು ಎಂದು ಉಚ್ಚರಿಸಲು ಸಾಧ್ಯವಾಗದ ಕಾರಣ ಕೂರ್ಗ್ ಎಂದು ಕರೆಯಲು ಆರಂಭಿಸಿದರು ಹಾಗೆಯೇ ಬ್ರಿಟೀಷರು ಮಡಿಕೇರಿಯನ್ನು ಮರ್ಕರ ಎಂದು ಕರೆಯುತ್ತಿದ್ದರು. ಹೊರಗಿನಿಂದ ಬರುವ ಜನರು ಪ್ರಕೃತಿಯ ಸೌಂದರ್ಯವನ್ನು ಸವಿಯಲು ಕೊಡಗಿನಲ್ಲಿ ಸಮಯವನ್ನು ಕಳೆಯಲು ಇಚ್ಛಿಸುತ್ತಾರೆ, ಆದ್ದರಿಂದ ಕೊಡಗು ಒಂದು ಪ್ರವಾಸಿ ತಾಣವಾಗಿದೆ. ಕೊಡಗಿನ ಆಚಾರ ವಿಚಾರ ವೇಷ ಭೂಷಣ ಎಲ್ಲೆಡೆಗಿಂತ ಭಿನ್ನವಾಗಿದೆ. ಹಾಗೆಯೇ ಇಲ್ಲಿಯ ಹಬ್ಬಗಳು ಸಹ ಭಿನ್ನವಾಗಿವೆ.



ಕೊಡಗಿನಲ್ಲಿ ಮೂರು ಹಬ್ಬಗಳನ್ನು ಮುಖ್ಯವಾಗಿ ಆಚರಿಸಲಾಗುತ್ತದೆ 'ಪುತ್ತರಿ', ಈ ಹಬ್ಬವನ್ನು ಸುಗ್ಗಿಹಬ್ಬದ ಸಮಯದಲ್ಲಿ ಆಚರಿಸಲಾಗುತ್ತದೆ. 'ಕೈಲ್‌ಪೋದ್' ಈ ಹಬ್ಬದಲ್ಲಿ ಆಯುಧಗಳನ್ನು ಇಟ್ಟು ಪೂಜೆ ಮಾಡಲಾಗುತ್ತದೆ. 'ಕಾವೇರಿ ಸಂಕ್ರಮಣ' ಹಬ್ಬವನ್ನು ವರ್ಷಕ್ಕೊಮ್ಮೆ ಕಾವೇರಿ ಮಾತೆಯು ತೀರ್ಥೋದ್ಭವವಾಗುವ ಸಂದರ್ಭದಲ್ಲಿ ಭಕ್ತಿಯಿಂದ ಆಚರಿಸಲಾಗುತ್ತದೆ. ಕೊಡಗು ಬೆಟ್ಟಗುಡ್ಡ ಹಚ್ಚಹಸಿರಿನಿಂದ ತುಂಬಿದ್ದು ಒಳ್ಳೆಯ ಗಾಳಿ ಮತ್ತು ನೀರನ್ನು ಹೊಂದಿದ್ದು ಕಣ್ಣಿಗೆ ಇಂಪನ್ನು ನೀಡುವ ಈ ಕೊಡಗು ನಯನಮನೋಹರ. ಕೊಡಗಿನಲ್ಲಿ ಶೇಕಡ (73.33%) ಮರಗಳಿಂದ ಕೂಡಿದೆ. (ಎಫ್.ಎಸ್.ಐ 2019) ಹಾಗು ಸಂರಕ್ಷಣೆಯನ್ನು ಅರಣ್ಯ ಇಲಾಖೆಗಳು ಮತ್ತು ಸ್ಥಳಿಯ ಸಮುದಾಯದವರು ನಿರ್ವಹಿಸುತ್ತಿದ್ದಾರೆ. ಕೊಡಗಿನ ಕಾಫಿ ತೋಟಗಳಲ್ಲೂ ದೊಡ್ಡ ದೊಡ್ಡ ಮರಗಳನ್ನು ಕಾಣಬಹುದು.


ವಿಶ್ವದೆಲ್ಲೆಡೆ ಬೇರೆ ಬೇರೆ ಕಡೆ ಪ್ರಕೃತಿ ದೇವಿಯನ್ನು ಪೂಜಿಸುವುದು, ಕಾಡಿನಲ್ಲಿ ಗಿಡಗಳು, ಪ್ರಾಣಿಗಳನ್ನು ದೇವರೆಂದು ಪೂಜಿಸಲಾಗುತ್ತದೆ. ಇದರಿಂದ ಭಯಭಕ್ತಿಯನ್ನು ಜನರಲ್ಲಿ ಮೂಡಿಸುತ್ತದೆ. ಅಶ್ವತ್ಥ ಮರ, ಆಲದ ಮರ ಮತ್ತು ಪ್ರಾಣಿಗಳಾದ ಆನೆ, ಹುಲಿ ಮತ್ತು ಮಂಗಗಳನ್ನು ಪೂಜಿಸಲಾಗುವುದು. ಕಲ್ಲಿನ ಮೂರ್ತಿಯನ್ನು ಪವಿತ್ರ ಮರದ ಕೆಳಗೆ ಇಟ್ಟು ಮೊದಲು ಪೂಜಿಸಲಾಗುತ್ತದೆ. .

ನಂತರದ ದಿನಗಳಲ್ಲಿ ದೇವಕಾಡಿನ ಸುತ್ತಲೂ ಬೇಲಿಯನ್ನು ಹಾಕಲು ಆರಂಭಿಸಿದರು. ಹಾಗೆಯೇ ಕಲ್ಲಿನ ಮೂರ್ತಿ ಇರುವ ಸ್ಥಳದಲ್ಲಿ ಗುಡಿಯನ್ನು ಕಟ್ಟಿದರು. ಹಿಂದಿನ ಭಾರತದ ಇತಿಹಾಸವನ್ನು ನೋಡಿದರೆ ನಮ್ಮ ಭಾರತೀಯ ಸಂಸ್ಕೃತಿಯಲ್ಲಿ ಈಗಾಗಲೇ ತಿಳಿಸಿರುವ ಹಾಗೇ ಪ್ರಾಣಿಗಳನ್ನು ಮತ್ತು ಮರಗಳನ್ನು ಬಹಳ ಪ್ರಾಮುಖ್ಯತೆಯನ್ನು ನೀಡಿ ಪೂಜಿಸಲಾಗುವುದು.

ನಮ್ಮ ಭಾರತದಲ್ಲಿ ಪ್ರಕೃತಿಯನ್ನು ರಕ್ಷಿಸುವುದು ನಮ್ಮ ಸಂಪ್ರದಾಯ ಎಂದರೆ ತಪ್ಪಾಗಲಾರದು, ಹಿಂದಿನಕಾಲದಿಂದಲೂ ಮರಗಳು, ಪ್ರಾಣಿಗಳು ಮತ್ತು ಕಾಡುಗಳನ್ನು ಪೂಜಿಸುತ್ತಾ ಬಂದಿರುತ್ತೇವೆ. ಬಹಳ ಹಿಂದೆ ಪ್ರಕೃತಿ, ಗುಡ್ಡ, ಬೆಟ್ಟಗಳ ಜೊತೆ ಬದುಕುತ್ತಿದ್ದವರು ಮರಗಳನ್ನು ದೇವರೆಂದು ನಂಬಿ ಪೂಜಿಸುತ್ತಿದ್ದರು. ಅದಲ್ಲದೆ ಭಗವದ್ಗೀತೆ, ಮಹಾಭಾರತ, ಶಿವಪುರಾಣ, ಸ್ಕಂದಪುರಾಣ, ವಾಯುಪುರಾಣ, ವರಹಾಮಿಹಿರ ಸಂಹಿತೆಗಳಲ್ಲಿಯೂ ಅರಣ್ಯಗಳ ಮಹತ್ವವನ್ನು ಪ್ರತಿಪಾದಿಸಲಾಗಿದೆ.

ಈ ದೇವಕಾಡುಗಳಲ್ಲಿ ಬಹಳಷ್ಟು ಔಷಧೀಯ ಗುಣಗಳುಳ್ಳ ಗಿಡಗಳನ್ನು ಕಾಣಬಹುದು. ಇದರ ಸಂರಕ್ಷಣೆಯನ್ನು ಸ್ಥಳೀಯ ಸಮುದಾಯದವರು ನಿರ್ವಹಿಸುತ್ತಿದ್ದಾರೆ. ಮರಗಳನ್ನು ದೇವರ ಸ್ವರೂಪ ಕೊಟ್ಟು ಪೂಜೆ ಮಡಲಾಗುವುದು. ಮಹಿಳೆಯರು ಹಲವಾರು ವಿಷಯಗಳಿಗೆ ಮರಗಳಿಗೆ ಪೂಜೆಯನ್ನು ಸಲ್ಲಿಸುತ್ತಾರೆ. ಮದುವೆಯಾಗದ ಹುಡುಗಿಯರು ಶೀಘ್ರವಾಗಿ ಕಂಕಣಭಾಗ್ಯ ಕೂಡಿ ಬರಲೆಂದು ಪೂಜೆಸಲ್ಲಿಸುತ್ತಾರೆ. ಮದುವೆಯಾದ ಮಹಿಳೆಯರು ಆರೋಗ್ಯವಂತ ಮಗು ಪಡೆಯಲು ಮರಗಳನ್ನು ಪೂಜಿಸುತ್ತಾರೆ.

ವೃದ್ಧ ಮಹಿಳೆಯರು ಜ್ಞಾನೋದಯ (Self Actualization) ಪಡೆಯಲು ಪೂಜಿಸುತ್ತಾರೆ. ಪುರುಷರು ಅದರಲ್ಲೂ ರೈತರು ಬೆಳೆದ ಬೆಳೆಯು ಒಳ್ಳೆಯ ಫಸಲು ನೀಡಲೆಂದು ಬೇಡುತ್ತಾರೆ. ಹಾಗೆಯೇ ಮಾಡುವ ಎಲ್ಲಾ ಕೆಲಸ ಅಭಿವೃದ್ಧಿಯಾಗಿ ದನ ಕರುಗಳಿಗೂ ಒಳ್ಳೆಯದಾಗಲೆಂದು ಬೇಡುತ್ತಾರೆ. ಆಯಸ್ಸು, ಆರೋಗ್ಯ, ಕೊಟ್ಟು ನಮ್ಮ ಕುಟುಂಬದವರನ್ನು ಕಾಪಾಡಲೆಂದು ಬೇಡುತ್ತಾರೆ. ಇಂತಹ ಮರಗಳನ್ನು ಮುಖ್ಯವಾಗಿ ಪೂಜಿಸಲೆಂದೇ ರಕ್ಷಿಸಿಸಲಾಗುತ್ತದೆ.




Source : Department of Biological Sciences,
Indian Institute for Science Education and Research

ದೇವಕಾಡುಗಳು ಕೇವಲ ನಮ್ಮ ರಾಜ್ಯ ಹಾಗೂ ನಮ್ಮ ದೇಶದಲ್ಲಿ ಮಾತ್ರವಲ್ಲದೆ ಬೇರೆ ದೇಶದಲ್ಲೂ ಕಾಣಬಹುದು. ಉತ್ತರ ಅಮೆರಿಕಾದ ಪಾರ್ಕ್ ಸೆಮೆಟೀಸ್, ನೈಜೀರಿಯಾದ ಪೆಟೇಶ್ ದೇವಕಾಡು, ಇಥಿಯೋಪಿಯಾದ ಚರ್ಚ್ ಫಾರೆಸ್ಟ್, ನೇಪಾಳದ ಗುತ್ತಿ ಕಾಡು, ಚೈನಾದ ಮೊನಾಸ್ಟಿಕ್ ಕಾಡು, ಬೆಲ್‌ಜಿಯಮ್‌ನ ಊಸ್ಟಾಕರ್ ದೇವಕಾಡು ಇವುಗಳು ಉದಾಹರಣೆಗಳಾಗಿವೆ.

ಭಾರತದಲ್ಲಿ ಸಾಮಾನ್ಯವಾಗಿ ದಕ್ಷಿಣ ಭಾರತದಲ್ಲಿ ಹೆಚ್ಚಾಗಿ ದೇವರಬನ, ಪವಿತ್ರವನ, ನಾಗಬನ ಅಥವಾ ದೇವರ ಕಾಡು ಎಂದು ಕರ್ನಾಟಕದಲ್ಲಿ ಕರೆಯಲಾಗುತ್ತದೆ. ಹಾಗೆ ಕೇರಳದಲ್ಲಿ ಕಾವು ಮತ್ತು ತಮಿಳುನಾಡಿನಲ್ಲಿ ಕೋವಿಲ್ ಕಾಡು ಎಂದು ಕರೆಯಲಾಗುತ್ತದೆ. ಮಹಾರಾಷ್ಟ್ರದಲ್ಲಿ ದೇವೇರಿ, ಬಿಹಾರ್‌ನಲ್ಲಿ ಸರಾನಸ್ ಎಂದು ಹಾಗೆಯೇ ರಾಜಸ್ತಾನದಲ್ಲಿ ಓರನ್ಸ್ ಮತ್ತು ಮೇಘಾಲಯದಲ್ಲಿ ಲೌಕೈನ್‌ತಸ್ ಎಂದು ಕರೆಯುತ್ತಾರೆ.



ದೇವರಕಾಡಿನಲ್ಲಿ ಕಂಡು ಬರುವ ಔಷಧೀಯ ಸಸ್ಯಗಳು

ಕೊಡಗು ಜಿಲ್ಲೆ ಕರ್ನಾಟಕ ರಾಜ್ಯದಲ್ಲೇ ಸಂಸ್ಕೃತಿಯಲ್ಲಿ ವಿಭಿನ್ನವಾದ ಜಿಲ್ಲೆ. ಕೊಡಗು ಜಿಲ್ಲೆಯ ಬಹುತೇಕ ಗ್ರಾಮಗಳಲ್ಲಿ ದೇವಕಾಡು ಇರುತ್ತದೆ. ಜಗತಿನಲ್ಲೇ ಅತೀ ಹೆಚ್ಚು ದೇವಕಾಡು ಇರುವುದು ಕೊಡಗಿನಲ್ಲಿ.ನಮ್ಮ ಕೊಡಗಿನಲ್ಲಿ 1214 ದೇವಕಾಡುಗಳಿವೆ ಹಾಗು 2550 ಹೆಕ್ಟೇರ್ ಪ್ರದೇಶ ಹೊಂದಿದ್ದು 165 ದೇವರುಗಳ ಹೆಸರಲ್ಲಿ ಪೂಜಿಸಲಾಗುತ್ತಿದೆ.



ದೇವಕಾಡಿನ ಮಣ್ಣಿನ ಮೂರ್ತಿಗಳು

**ಕರ್ನಾಟಕದ ದೇವಕಾಡುಗಳು :**

ಉತ್ತರ ಕನ್ನಡ, ದಕ್ಷಿಣ ಕನ್ನಡ, ಉಡುಪಿ, ಶಿವಮೊಗ್ಗ, ಕೊಡಗು ಮತ್ತು ಚಿಕ್ಕಮಗಳೂರು ಜಿಲ್ಲೆಗಳಲ್ಲಿ ದೇವಕಾಡುಗಳನ್ನು ಕಾಣಬಹುದು. ದೇವಕಾಡುಗಳನ್ನು ಬೇರೆ ಬೇರೆ ಹೆಸರಿನಲ್ಲಿ ಕರೆಯುತ್ತಾರೆ ದೇವಕಾಡು, ದೇವರ ಕಾಡು, ನಾಗಬನ, ಬೀರಲ ಬನ, ಚಂಡಿಬನ ಮತ್ತು ಭೂತಪ್ಪನ ಬನ, ಉತ್ತರ ಕನ್ನಡ ಜಿಲ್ಲೆಯಲ್ಲಿ ಕನ ಹಾಗು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಾಗಬನ ಎಂದೂ ಕರೆಯಲಾಗುತ್ತದೆ.

ಕೊಡಗು ಜಿಲ್ಲೆಯ 1214 ದೇವಕಾಡುಗಳಲ್ಲಿ ವಿರಾಜಪೇಟೆ ತಾಲೂಕಿನಲ್ಲಿ 508 ಮಡಿಕೇರಿ ತಾಲ್ಲೂಕಿನಲ್ಲಿ 306 ಮತ್ತು ಸೋಮವಾರಪೇಟೆ ತಾಲ್ಲೂಕಿನಲ್ಲಿ 400 ದೇವರಕಾಡುಗಳಿವೆ. ದೇಶದಲ್ಲೇ ಅತಿ ಹೆಚ್ಚು ದೇವಕಾಡುಗಳನ್ನು ಕೊಡಗಿನಲ್ಲಿ ಕಾಣಬಹುದು. ಕೊಡಗಿನ ಪ್ರತಿ ಊರುಗಳಲ್ಲಿ ದೇವಕಾಡುಗಳು ಕಾಣಸಿಗುತ್ತವೆ.




ಕೊಡಗಿನ ದೇವರಕಾಡುಗಳು:
(ಕುಶಾಲಪ್ಪ ಮತ್ತು ಕುಶಾಲಪ್ಪ 1996)

ವಿರಾಜಪೇಟೆ ತಾಲ್ಲೂಕಿನಲ್ಲಿರುವ 508 ದೇವಕಾಡಿನಲ್ಲಿ 171 ಅಯ್ಯಪ್ಪ ದೇವಕಾಡು, 62 ಭಗವತಿ, 33 ಭದ್ರಕಾಳಿ, 25 ಮಾದೇವ, 20 ಚಾಮುಂಡಿ, 19 ಹೊಲೆದೇವ, 14 ವಿಷ್ಣುಮೂರ್ತಿ, 9 ಬಸವೇಶ್ವರ, 8 ಮಹಾದೇವ, 6 ದುರ್ಗಿ, 6 ಮಾರಮ್ಮ ದೇವರ ಹೆಸರಿನಲ್ಲಿ ರಕ್ಷಿಸಲಾಗಿದೆ. ಇವುಗಳಲ್ಲದೆ 136 ಕಾಡಲ್ಲಿ ಬೇರೆ ದೇವರ ಪೂಜೆ ನಡೆಯುತ್ತಿದೆ. ನಮ್ಮ ವಿರಾಜಪೇಟೆಯಲ್ಲಿರುವ ದೇವಾನುದೇವತೆಗಳು ನಮ್ಮ ನೆರೆಯ ರಾಜ್ಯವಾದ ಕೇರಳದಿಂದ ಬಂದವು, ಹಾಗಾಗಿ ಆ ದೇವಸ್ಥಾನಗಳು ಕೇರಳ ಶೈಲಿಯಲ್ಲಿದ್ದು ಇಲ್ಲಿನ ತಿರಳಕಾರರು ಮಲಯಾಳ ಭಾಷೆಯಲ್ಲಿ ಮಾತನಾಡುವುದು ಹೆಚ್ಚಾಗಿ ಕಂಡುಬರುತ್ತದೆ.

ಮಡಿಕೇರಿ ತಾಲ್ಲೂಕಿನಲ್ಲೂ ಕೂಡ ಕೇರಳ ಭಾಷೆಯನ್ನು ಬಳಸುತ್ತಾರೆ. ಇದಲ್ಲದೆ ನೆರೆ ಜಿಲ್ಲೆಯಾದ ದಕ್ಷಿಣ ಕನ್ನಡ ನಮ್ಮ ಜಿಲ್ಲೆಗೆ ಹತ್ತಿರವಿರುವುದರಿಂದ ಇಲ್ಲಿಯ ಪ್ರಭಾವವೂ ಹೆಚ್ಚಿದೆ ಎನ್ನಬಹುದು.

ದಕ್ಷಿಣ ಕನ್ನಡ ಜಿಲ್ಲೆ ಗಡಿಯಾಗಿರುವುದರಿಂದ "ನಾಗಬನ" ಗಳಿವೆ ಅದಲ್ಲದೆ ಆ ಜಿಲ್ಲೆಯ ದೇವದೇವತೆಯಗಳಾದ ಪಂಜುರ್ಲಿ, ಕೊರತಿ, ಶಾಸ್ತ್ರ ದೇವರ ಪೂಜೆಗಳು ಕಂಡುಬರುತ್ತವೆ.

ಸೋಮವಾರಪೇಟೆ ತಾಲ್ಲೂಕಿನ ಪಕ್ಕದ ಜಿಲ್ಲೆಯಾದ ಹಾಸನ ಮತ್ತು ಮೈಸೂರಿನ ಪ್ರಭಾವವು ಜಾಸ್ತಿ ಇರುವುದರಿಂದ ಈ ತಾಲ್ಲೂಕಿನಲ್ಲಿ ದೇವಕಾಡಿನ ಪದ್ಧತಿ ಬೇರೆ ಎರಡು ತಾಲ್ಲೂಕಿಗಿಂತ ಬಿನ್ನವಾಗಿದೆ. ಇಲ್ಲಿನ ದೇವಕಾಡುಗಳಲ್ಲಿ ಸುಬ್ಬಮ್ಮ, ನಾಡಮ್ಮ, ಕೆಂಚಮ್ಮ, ಕುಂತಿಯಮ್ಮ ಹಾಗೆಯೇ ನಂಜುಂಡೇಶ್ವರ, ಮಹಾಲಿಂಗೇಶ್ವರ ದೇವರುಗಳನ್ನು ಕಾಣಬಹುದು, ಹೀಗೆ ಮೂರು ತಾಲ್ಲೂಕುಗಳಲ್ಲಿಯೂ ಬೇರೆ ಬೇರೆ ತರಹದ ದೇವ, ದೇವತೆಯರನ್ನು ಪೂಜೆ ಮಾಡುವ ಪದ್ಧತಿ ಇದೆ. ಹಾಗೆಯೆ ಪೂಜೆ ಮಾಡುವ ಬಗೆ, ಹಾಡು, ನೃತ್ಯ ಕೂಡ ಭಿನ್ನವಾಗಿರುತ್ತದೆ.

ಅರಣ್ಯ ಇಲಾಖೆಯ ಮಾಹಿತಿಯಂತೆ 2500 ಹೆಕ್ಟೇರ್ ಪ್ರದೇಶ ಅಂದರೆ ಜಿಲ್ಲೆಯ 2% ಭೂ ಭಾಗದಷ್ಟು ದೇವಕಾಡುಗಳಿವೆ. ಕೊಡಗಿನ ದೇವಕಾಡುಗಳನ್ನು 18 ಮೂಲನಿವಾಸಿಗಳು ಸಂರಕ್ಷಿಸಿಕೊಂಡು ಬಂದಿರುತ್ತಾರೆ. ಪ್ರತಿ ಗ್ರಾಮದ ಗ್ರಾಮಸ್ಥರು ಈ ದೇವಕಾಡುಗಳ ನಿರ್ವಹಣೆಯನ್ನು ಮಾಡುತ್ತಾರೆ. ಜಗತ್ತಿನಲ್ಲಿ ಹಲವಾರು ದೇವಕಾಡುಗಳು ನಶಿಸಿಹೋಗಿವೆ. ಆದರೆ ನಮ್ಮ ಕೊಡಗಿನಲ್ಲಿ ಅರಣ್ಯ ಇಲಾಖೆ ಮತ್ತು ಗ್ರಾಮಸ್ಥರ ಸಹಕಾರದೊಂದಿಗೆ ದೇವಕಾಡುಗಳನ್ನು ಸಂರಕ್ಷಿಸಿಕೊಂಡು ಬಂದಿದೆ ಎನ್ನಬಹುದು.

**ಕೊಡಗಿನ ತಾಲ್ಲೂಕಿನಲ್ಲಿರುವ ದೇವರಕಾಡುಗಳು: (ಕುಶಾಲಪ್ಪ ಮತ್ತು ಕುಶಾಲಪ್ಪ 1996)**

| ತಾಲೂಕು ಸಂಖ್ಯೆ | ಸಂಖ್ಯೆ |
|---|---|
| ವಿರಾಜಪೇಟೆ | 508 |
| ಮಡಿಕೇರಿ | 306 |
| ಸೋಮವಾರಪೇಟೆ | 400 |
| ಒಟ್ಟು | 1214 |

**ಕೊಡಗಿನ 10 ದೊಡ್ಡ ದೇವಕಾಡುಗಳು :(ಡಾ. ಸಿ.ಜಿ. ಕುಶಾಲಪ್ಪ ಮತ್ತು ಕುಶಾಲಪ್ಪ 1996)**

| ಕ್ರಮ ಸಂ | ದೇವರುಗಳು | ಸ್ಥಳ | ಎಕರೆ |
|---|---|---|---|
| 1 | ಪಾಡಿ ಇಗ್ಗುತಪ್ಪ | ಕುಂಜಿಲ | 143.32 |
| 2 | ಈಶ್ವರ ಅಪ್ಪಂಡಿರಪ್ಪ | ಕಟಕೆರೆ | 129.39 |
| 3 | ಬಸವೇಶ್ವರ | ವಾಲನೂರ್ ತ್ಯಾಗತೂರು | 121.68 |
| 4 | ಮಹಾವಿಷ್ಣು | ಕೆಪಟ್ಟಿ | 83.49 |
| 5 | ಐಯ್ಯಪ್ಪ | ಮದೆ | 56.68 |
| 6 | ಮಹಾವಿಷ್ಣು | ಕೊಪಟ್ಟಿ | 51.01 |
| 7 | ಕೆಮನಿ ಐಯ್ಯಪ್ಪ | ಪಾಲಂಗಾಲ | 45.75 |
| 8 | ಐಯ್ಯಪ್ಪ ಭಗವತಿ | ಹೆಗ್ಗಳ | 41.78 |
| 9 | ಸುಗ್ಗಿ | ತಡ್ ತೆರ ಶೆಟ್ಟಳ್ಳಿ | 40.42 |
| 10 | ಸಂಗಮ | ಭಾಗಮಂಡಲ | 37.65 |

ದೇವಕಾಡಿನ ದೇವತೆಗಳು :ದೇವತೆಗಳಲ್ಲಿ ಭಗವತಿ, ಭದ್ರಕಾಳಿ, ದುರ್ಗೆ, ಪನ್ನಂಗಾಲತಮ್ಮೆ, ಚಾಮುಂಡಿ- ಕರಿಚಾವುಂಡಿ, ಪುಲಿಚಾವುಂಡಿ, ನಡೆಚಾವುಂಡಿ, ಮುಂಜಾವುಂಡಿ, ಚೌಡಮ್ಮ, ಮಾರಮ್ಮ, ಮಂದತವ್ವ (ಪಾರ್ವತಿ), ದಬ್ಬಚ್ಚವೆ, ಕಾವೇರಮ್ಮ, ಮಹಾಲಕ್ಷ್ಮೀ, ದೇವಿರಮ್ಮ, ನಾಡಮ್ಮ, ಕೆಂಚಮ್ಮ, ಪೂವ್ವದಿ, ಕುಂತಿಯಮ್ಮ, ನೀಲಮ್ಮ, ಸಜ್ಜಲವೆ, ಸಬತಾಯಿ(ಸುಗ್ಗಿದೇವರು) ಬೆಂಬಳೂರಮ್ಮ, ಪಿರಿಯಾಪಟ್ಟಣದಮ್ಮ. ಪೊನ್ನಿ, ಕುಕ್ಕಲಚ್ಚಿ, ಸಪ್ತಮಾತ್ರಿಕೆ, ಮಾಸ್ತಮ್ಮ, ಪೂಜಿಸಲಾಗುತ್ತಿದೆ.

ಪುರುಷ ದೇವತೆಗಳಲ್ಲಿ ಶಿವಲಿಂಗ ಅಥವಾ ತ್ರಿಶೂಲ ಸಂಕೇತ ರೂಪದಲ್ಲಿರುವ ಐಯ್ಯಪ್ಪ (ಕೇರಳದ ಶಾಸ್ತಾವು ಅಯ್ಯಪ್ಪನಲ್ಲ) ಬಸವೇಶ್ವರ, ಗಣಪತಿ, ಮಹದೇವರು ಮಹಲಿಂಗೇಶ್ವರ ಪಂಚಲಿಂಗೇಶ್ವರ, ನಂಜುಂಡೇಶ್ವರ, ರಾಮೇಶ್ವರ ಕನ್ನೇಶ್ವರ, ಗೆಜೇಶ್ವರ, ಸೋಮೇಶ್ವರ, ಮಲ್ಲಿಕಾರ್ಜುನ, ವೀರಭದ್ರ, ಕಾಲಭೈರವ (ಕಾಕೋಟಚ್ಚಪ್ಪ) ಇಗ್ಗುತಪ್ಪ, ತಾತಪ್ಪ ದೇವರು, ಶ್ರೀರಂಗ, ಭದ್ರಮೂರ್ತಿ, ವಿಷ್ಣುಮೂರ್ತಿ, ಕಲ್ಲಾಳಮೂರ್ತಿ, ಕುಂಟೇಲ್ಪುರ್, ಕ್ಷೇತ್ರಪ್ಪ, ಮುತ್ತಪ್ಪ, ಭೂತ ದೇವರು ಮಲೆದೇವರು, ಕಮ್ಮಕಟ್ಟಪ್ಪ, ಚೆನ್ನತಪ್ಪ, ಮಂಜುನಾಥ, ಕುಮಾರಲಿಂಗೇಶ್ವರ ದೇವರ ಕಾಡಿನಲ್ಲಿ ನೆಲೆಸಿರುವ ದೇವರುಗಳಲ್ಲಿ ಪ್ರಮುಖರು. ಕೆಲವೆಡೆ ವೀರರ ವನವಿದ್ದು ದೇವರಂತೆ ಆರಾಧಿತರಾಗಿದ್ದಾರೆ.

ಪರಿಸರಕ್ಕೆ ತಂಪು ಒದಗುತ್ತದೆ. ವನ್ಯ ಪ್ರಾಣಿಗಳಿಗೆ ರಕ್ಷಣೆ ಒದಗಿ ಪರಿಸರ ಸಮತೋಲನವಿರುತ್ತದೆ. ಮಳೆ ಚೆನ್ನಾಗಿ ಆಗುತ್ತದೆ. ಈ ಕಾಡಿನ ನೆರೆಗೆ ಇರುವ ಕೃಷಿಗದ್ದೆ, ತೋಟಗಳಿಗೆ ಮಳೆ ಬಿದ್ದಾಗ ಕೊಳೆತ ಎಲೆಗಳ ಸಾವಯವ ಗೊಬ್ಬರ ಲಭ್ಯವಾಗುತ್ತದೆ. ಆದ್ದರಿಂದ ಅದರ ರಕ್ಷಣೆಯಲ್ಲಿ ಸಾಮೂಹಿಕ ಹೊಣೆಗಾರಿಕೆ ಇದ್ದು, ಸೌಹಾರ್ದ ಬೆಳೆಯುತ್ತದೆ. ಸ್ವಂತ ಬಾಣೆ, ಜಮೀನು ಆಗಿ ಮಾರ್ಪಟ್ಟಿದೆ, ಆಕ್ರಮಿತವಾದರೆ ಕೇವಲ ಆರ್ಥಿಕ ದೃಷ್ಟಿ ಪ್ರಧಾನವಾಗುತ್ತದೆ.

ಇರುವಷ್ಟು ದೇವರ ಕಾಡುಗಳನ್ನಾದರೂ ಉಳಿಸಿದರೆ ಕಾಡುಗಳ ರಕ್ಷಣೆ, ಶುದ್ಧಗಾಳಿ, ದೈವಿಕ ಮೌಲ್ಯದ ಅರಿವು ಒದಗುತ್ತದೆ. ಕರ್ನಾಟಕದ ಕೊಡಗಿನ ಸಂಸ್ಕೃತಿ ಉಳಿಯುತ್ತದೆ. ಇದಲ್ಲದೆ ಒಂದು ಎಕರೆ ಅರಣ್ಯ ಪ್ರದೇಶ ಋತುವೊಂದರಲ್ಲಿ 3000 ಘನ ಮೀಟರುಗಳಷ್ಟು ತೇವಾಂಶ ಸಂಗ್ರಹಿಸುತ್ತದೆ. ರಕ್ಷಣೆಗೊಂಡ ಅರಣ್ಯದಿಂದ ಭೂಸವೆತದ ಪ್ರಮಾಣ ಕಡಿಮೆ ಆಗುತ್ತದೆ. ಕೊಡಗಿನ ಎಲ್ಲಾ ಅರಣ್ಯಗಳಲ್ಲಿ ಆಯುರ್ವೇದ ಹಾಗೂ ಸಿದ್ದ ಪದ್ಧತಿಗೆ ಒದಗುವ ಔಷಧೀಯ ಗಿಡ ಮರಗಳು ಸುಮಾರು 747 ಮಾದರಿಗಳಷ್ಟು ಹೊಂದಿವೆ, ಎಂದು ಇತ್ತೀಚೆಗೆ ಗುರುತಿಸಿರುವುದು ತುಂಬಾ ಗಮನಾರ್ಹವಾಗಿದೆ.

**ವಿದ್ಯಾ ಜಗದೀಶ್ ಪುತ್ತಾಮನೆ**
**ಸಂಶೋಧನಾ ಲೇಖಕಿ ಮತ್ತು ಗಾಯಕಿ**
**ಕಿರುಗೂರು, ಪೊನ್ನಂಪೇಟೆ ಕೊಡಗು**
**ಇಮೇಲ್:vidyavocal5@gmail.com**